ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

ಹೇಳಿಕೆ ಹಾಳೆ (ಆರ್.ಪಿ. ಸಂಖ್ಯೆ 57) ನಮೂನೆ ಸಂಖ್ಯೆ 4 (ಸಿವಿಲ್)

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 314/2024

.....

CW 03
PW 02

ಹೆಸರು	:	ಜ್ಯೋತಿಬಾ ಪಾವಸೆ
ತಂದೆಯ ಹೆಸರು	:	ಅಶೋಕ
ವಯಸ್ಸು	:	38 ವರ್ಷ
ಉದ್ಯೋಗ	:	ಖಾಸಗಿ ಕೆಲಸ
ವಾಸಸ್ಥಳ	:	ದಾಂಡೇಲಿ.

ದಿನಾಂಕ 25-05-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1, 2, 4 ಮತ್ತು 5 ರವರು ಪರಿಚಯವಿದ್ದಾರೆ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಪಂಚರಾಗಲು ನೀಡಿದ ನೊಟೀಸ ಆಗಿದ್ದು, ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ನೊಟೀಸ ನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು **ನಿಪಿ 4 ಎ ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗದ ಪಂಚನಾಮೆ ಆಗಿದ್ದು, ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಘಟನಾ ಜಾಗ ಪಂಚನಾಮೆಯನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ2 ಬಿ ಎಂದು** ಗುರುತಿಸಲಾಯಿತು. ಸದರಿ ಸಹಿಯನ್ನು ಪೊಲೀಸ ಠಾಣೆಯಲ್ಲಿ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ 3 ಅನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ತಾವು, ಚಾಸಾ 1 ಮತ್ತು 2 ರವರು ಇರುತ್ತೇವೆ ಎನ್ನುತ್ತಾರೆ. ಸದರಿ ಭಾವಚಿತ್ರವನ್ನು ಒಂದು ಮನೆಯ ಮುಂದೆ ತೆಗೆಯಲಾಗಿದೆ ಅದು ಯಾರ ಮನೆ ಮತ್ತು ಯಾವ ಕಾರಣಕ್ಕೆ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು).

ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.

ದಿನಾಂಕ 27-02-2024 ರಂದು ಪೊಲೀಸರು ನಿಮ್ಮನ್ನು ಮತ್ತು ಚಾಸಾ 2 ರವರನ್ನು ಕರೆಯಿಸಿ ನಿಪಿ 4 ರಂತೆ ಇರುವ ನೊಟೀಸ ನೀಡಿ ನಿಮ್ಮ ಒಪ್ಪಿಗೆ ಪಡೆದು ಚಾಸಾ 1 ರವರು ತೋರಿಸಿದ ಘಟನಾ ಜಾಗ ದಾಂಡೇಲಿ ತಾಲೂಕಿನ ಗಾಂವಠಾಣಾ ನವಗ್ರಾಮ ಕೆರಿಯ ಚಾಸಾ 1 ರವರ ಮನೆಯ ಮುಂದಿನ ಅಂಗಳದಲ್ಲಿ ನಿಮ್ಮ ಸಮಕ್ಷಮ ಪಂಚನಾಮೆಯನ್ನು ಬೆಳಗ್ಗೆ 10-30 ರಿಂದ 11-30 ರ ವರೆಗೆ ಜರುಗಿಸಿ ನಿಮಗೆ ಓದಿ ಹೇಳಿ ನಿಮ್ಮ ಸಹಿ ಪಡೆದು, ನಿಪಿ 3 ರಂತೆ ಇರುವ ಭಾವಚಿತ್ರವನ್ನು ತೆಗೆದರು ಎಂದರೆ ಸರಿಯಲ್ಲ.

ದಿನಾಂಕ 27-02-2024 ರಂದು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ ನಾನು ದಿನಾಂಕ 26-02-2024 ರಂದು ಸಂಜೆ 06-30 ಗಂಟೆಗೆ -------- ದೂರು ದಾಖಲಿಸಿರುವ ವಿಷಯ ತಿಳಿದಿರುತ್ತದೆ ಎಂದು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಅವ ಹೇಳಿಕೆಯನ್ನು ನಿಪಿ 5 ಎಂದು ಗುರುತಿಸಲಾಯಿತು. ಪೊಲೀಸರು ನಿಮ್ಮ ಸಮಕ್ಷಮ ಪಂಚನಾಮೆಯನ್ನು ಜರುಗಿಸಿದರೂ, ನೀವು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.